ಓ.ಎಸ್. ನಂ. 178/2015

ಪಿ.ಡಬ್ಲ್ಯು: 01 (ಕಾಳಪ್ಪ)

ದಿನಾಂಕ: 15.09.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: 1 ರಿಂದ 3 ನೇ ಪ್ರತಿವಾದಿ ಪರ – ಶ್ರೀ AKP ವಕೀಲರಿಂದ.

ಈ ದಾವೆಯನ್ನು ಭಾಗಕ್ಕಾಗಿ ಸಲ್ಲಿಸಿರುತ್ತೇನೆ. ವಕೀಲರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನಾನು ಸಲ್ಲಿಸಿರುವ ಪ್ರಮಾಣ ಪತ್ರ ಕನ್ನಡದಲ್ಲಿ ಇರುತ್ತದೆ. ಸಾಕ್ಷಿ ಮುಂದುವರೆದು ನಾನು ಕನ್ನಡದಲ್ಲಿ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂಬರ್ಗಳು ನನಗೆ ಗೊತ್ತಿಲ್ಲ. ಆದರೆ ಭಾಗಕ್ಕೆ ಬರಬೇಕಾದ ಆಸ್ತಿಗಳನ್ನು ಸೇರಿಸಿರುತ್ತೇನೆ. ಅದರ ಚೆಕ್‌ಬಂದಿಗಳನ್ನು ಹೇಳಲು ಆಗುವುದಿಲ್ಲ. ಆದರೆ ಅವುಗಳು ಯಾವ ಊರಿನಲ್ಲಿ ಇವೆ ಎಂದು ಹೇಳಬಲ್ಲೆ. ನನ್ನ ತಂದೆಯ ತಂದೆಯ ಹೆಸರು ಸಣ್ಣಬುಳ್ಳಪ್ಪರ ಅಡಿವೆಪ್ಪ. ದಾವಾ ಆಸ್ತಿ ನನ್ನ ಅಣ್ಣನ ಹೆಸರಿಗೆ ಮತ್ತು ನನ್ನ ತಾಯಿಯ ಹೆಸರಿಗೆ ಮತ್ತು ನನ್ನ ಅಜ್ಜನ ಹೆಸರಿಗೆ ಇರುತ್ತದೆ.

ನನ್ನ ತಂದೆಯವರು 1990 ರ ಹಿಂದೆ ಮುಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆಗೆ ಒಬ್ಬಳು ಹೆಣ್ಣು ಮಗಳು ಹಾಗೂ 3 ಜನ ಗಂಡು ಮಕ್ಕಳು ಇರುತ್ತೇವೆ. ನಮ್ಮ ಪೈಕಿ ಪರಶುರಾಮಪ್ಪ ಹಿರಿಯವನು. ಆತ ಈಗ ಮೃತಪಟ್ಟಿರುತ್ತಾನೆ. ನನ್ನ ತಾಯಿ 4-5 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಪರಶುರಾಮಪ್ಪ ಕೆ ಎಸ್ ಆರ್ ಟಿ ಸಿ ನಲ್ಲಿ ಕಂಡಕ್ಟರ್ ಆಗಿದ್ದರು. ಅವರಿಗೆ ಎಷ್ಟನೇ ಇಸವಿಯಲ್ಲಿ ಕೆಲಸ ಸಿಕ್ಕಿತ್ತು ಎಂದು ಹೇಳಲಾಗುವುದಿಲ್ಲ. ಆತನಿಗೆ ಕೆಲಸ ಸಿಗುವ ಮುಂಚೆಯೇ ನನ್ನ ತಂದೆ ಮೃತಪಟ್ಟಿದ್ದರು. ಆತ ಮದುವೆಯಾದ ನಂತರ ನೌಕರಿ ಸಿಕ್ಕಿರುತ್ತದೆ. ಕೆಲಸ ಸಿಕ್ಕ ನಂತರ ತನ್ನ ಹೆಂಡತಿ ತವರು ಮನೆಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಅನಂತರ ಅವರು ತಮ್ಮ ಪತ್ನಿಯೊಂದಿಗೆ ಹಡಗಲಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸುಳ್ಳು. ನನ್ನ ಹಾಗೂ ನನ್ನ ಸೋದರರ ನಡುವೆ ಕಿತ್ತಾಟ ಬರುತ್ತಿತ್ತು ಎಂದರೆ ಸಣ್ಣ ಪುಟ್ಟ ಜಗಳಗಳು ಆಗುತ್ತಿದ್ದವು.

ನನ್ನ ತಂದೆ ಮೃತಪಟ್ಟ ನಂತರ ನಾವು ಸೋದರರು ಪ್ರತ್ಯೇಕ ಮನೆ ಮಾಡಿ ವಾಸಿಸುತ್ತಿದ್ದೆವು ಎಂದರೆ ಸರಿ. ಆ ಸಮಯದಲ್ಲಿ ಕುಟುಂಬಕ್ಕೆ ಸಂಬಂಧಪಟ್ಟ ಆಸ್ತಿಗಳನ್ನು ಬಾಯಿ ಮಾತಿನ ಪಾಲುಕ್ರಮ ಮಾಡಿಕೊಂಡು ಬೇರೆ ಬೇರೆ ವಾಸಿಸುತ್ತಿದ್ದೆವು ಎಂದರೆ ಸುಳ್ಳು. 2 ನೇ ಪ್ರತಿವಾದಿ ಉಜ್ಜಿನಿ ಗ್ರಾಮದಲ್ಲಿ ವಾಸಿಸುತ್ತಿದ್ದರು ಎಂದರೆ ಇಲ್ಲ. 3 ನೇ ಪ್ರತಿವಾದಿ ಜಗಳೂರಿನ ತಾಲೂಕಿನ ಚಿಕ್ಕ ಉಜ್ಜಿನಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಯಿತು ಎಂದರೆ ಸರಿ. 2 ನೇ ಪ್ರತಿವಾದಿ ಚಿಕ್ಕಉಜ್ಜಿನಿ ಗ್ರಾಮದಲ್ಲಿ ಸಾಹುಕಾರರ ಮನೆಯಲ್ಲಿ ಕೆಲಸ ಮಾಡುತ್ತಿದ್ದು ಅನಂತರ ಕುರಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸುಳ್ಳು. ಆ ಸಮಯದಲ್ಲಿ ಅವರು ಐಟಂ ನಂಬರ್ 1 ನ್ನು ಖರೀದಿ ಮಾಡಿದ್ದರು ಎಂದರೆ

ಸುಳ್ಳು. ಅದೇ ರೀತಿ ಐಟಂ ನಂಬರ್ 3, 10 ನ್ನು ಅವರು ಕ್ರಯಕ್ಕೆ ಪಡೆದುಕೊಂಡರು ಎಂದರೆ ಸುಳ್ಳು. ಆದ ಕಾರಣ ಐಟ ನಂಬರ್ 1, 3, 10, 2 ನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು.

ನನ್ನ ತಾಯಿಯ ತವರು ಮನೆ ಕೆ ಐಯನಹಳ್ಳಿಯಾಗಿರುತ್ತದೆ. ಆಕೆಯ ಒಡಹುಟ್ಟಿದವರು ಯಾರು ಇಲ್ಲ. ಸರ್ವೆ ನಂಬರ್ 441ಡಿ ಐಟಂ ನಂಬರ್ 8 ರ ಸ್ವತ್ತು ನನ್ನ ತಾಯಿಯ ತವರು ಮನೆಗೆ ಸೇರಿತ್ತು ಎಂದರೆ ಸರಿ. ಐಟಂ ನಂಬರ್ 8 ರ ಸ್ವತ್ತು ನನ್ನ ತಾಯಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ದಾನಪತ್ರದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದು ನನ್ನ ತಾಯಿಯ ಹೆಸರಿಗೆ ಖಾತಾ ಬದಲಾವಣೆಯಾಗಿರುತ್ತದೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ.

ಐಟಂ ನಂಬರ್ 5 ನನ್ನ ತಾಯಿಯ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿ. ಐಟಂ ನಂಬರ್ 9 ರ ಸ್ವತ್ತನ್ನು ರೈಲ್ವೇ ಇಲಾಖೆಯವರು ಒತ್ತುವರಿ ಮಾಡಿಕೊಂಡಿದ್ದು ಅದಕ್ಕೆ ಅವರು ಹಣ ನೀಡಿದ್ದು ಅದನ್ನು ನಾವು ಹಾಗೂ ನಮ್ಮ ದೊಡ್ಡಪ್ಪನವರು ಹಂಚಿಕೊಂಡಿರುತ್ತೇವೆ. ಅದರಲ್ಲಿ 3 ಮತ್ತು 4 ನೇ ಪ್ರತಿವಾದಿಗೆ ಹಣ ನೀಡಿರುವುದಿಲ್ಲ. ಅವರು ದೂರ ದೂರ ಇದ್ದ ಕಾರಣ ಹಣವನ್ನು ಹಂಚಿರುವುದಿಲ್ಲ ಎಂದರೆ ಅವರು ಉತ್ತಮ ಪರಿಸ್ಥಿತಿಯಲ್ಲಿ ಇದ್ದ ಕಾರಣ ಹಣವನ್ನು ಹಂಚಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.